Pratham Mysore
Every Child in School and Learning Well

ಮಾಡಿರಿ-ನೋಡಿರಿ-ಕಲಿಯಿರಿ

# ಪ್ರಜ್ಞಾನ ಪತ್ರಿಕೆ

**01-09-2022** *ಪ್ರಥಮ್ ಮೈಸೂರ್ ಪ್ರೇರಿತ* *ಸಂಚಿಕೆ- 04*

## *ಅರಳುವ ಕಾಗದದ ಹೂಗಳು ಮಾಡೋಣ !*

***ಬೇಕಾಗುವ ಸಾಮಗ್ರಿಗಳು:***

***ವೃತ್ತ ಪತ್ರಿಕೆಯ ಬಣ್ಣ ಬಣ್ಣದ ಹಾಳೆಗಳು,ಕತ್ತರಿ,ತಟ್ಟೆ ಅಥವಾ ಅಗಲವಾದ ಬಟ್ಟಲು ನೀರು .***

***ಈ ಕೆಳಗಿನ ಸರಳ ಕ್ರಮಗಳನ್ನು ಅನುಸರಿಸಿ***

1. ವೃತ್ತ ಪತ್ರಿಕೆಯಿಂದ ದಳಗಲಿರುವ ಚಿಕ್ಕ ಚಿಕ್ಕ ಹೂಗಳನ್ನು ಕತ್ತರಿಸಿ.
2. ದಳಗಳನ್ನು ಒಳಭಾಗಕ್ಕೆ ಹಗುರಹಾಗಿ ಮಡಚಿ.ಈಗ ಮೊಗ್ಗು ಸಿದ್ಧವಾಯಿತು.
3. ತಟ್ಟೆ ಅಥವಾ ಬಟ್ಟಲಿನಲ್ಲಿ ನೀರನ್ನು ಹಾಕಿ,ಮುಚ್ಚಿದ ದಳಗಳು ಮೇಲೆಬರುವಂತೆ ತೇಲಿಬಿಡಿ.
4. ದಳಗಳು ನಿಧಾನವಾಗಿ ಬಿರಿಯತೊಡಗುತ್ತದೆ.



**ಮೊದಲನೇ ಹಂತ**



**ಎರಡನೇ ಹಂತ**



**ಮೂರನೇ ಹಂತ**

## ಇದು ಹೇಗಾಗುತ್ತದೆಯೆಂದು ನೋಡೋಣ

ಕಾಗದವನ್ನು ಮರದಿಂದ ತಯಾರಿಸಲಾಗುತ್ತದೆ. ಅದರಲ್ಲಿ ಮರದ ತೆಳುವಾದ ನಾರುಗಳು ಇವೆ. ಕಾಗದವನ್ನು ನೀರಿನಲ್ಲಿ ಹಾಕಿದಾಗ ಈ ನಾರು ನೀರನ್ನು ಹೀರಿಕೊಳ್ಳುತ್ತದೆ.ಈ ಪ್ರಯೋಗದಲ್ಲಿ ದಳಗಳು(ಕಾಗದ) ನೀರನ್ನು ಹೀರಿಕೊಂಡು, ಭಾರವಾಗಿ ಹಿಂದಕ್ಕೆ ಬಾಗುತ್ತವೆ.ಇದರಿಂದಾಗಿ ಮೊಗ್ಗುಗಳು ಬಿರಿದಂತೆ ಕಾಣುತ್ತವೆ.

**ಕೆಲವು ಪ್ರಶ್ನೆಗಳು:**

1.ಈ ಪ್ರಯೋಗವನ್ನು ಪ್ಲಾಸ್ಟಿಕ್ ಅಥವಾ ನುಣುಪಾದ ಕಾಗದದಿಂದ ಮಾಡಿ ಏನಾಗುವುದೆಂದು ತಿಳಿಯಿರಿ. ಕಾರಣವನ್ನು ತಿಳಿಯಲು ಪ್ರಯತ್ನಿಸಿ.



2.ನೀರಿನ ಬದಲು ಎಣ್ಣೆಯನ್ನು ಬಳಸಿದಾಗ ಏನನ್ನು ಗಮನಿಸಬಹುದು?

**ನಿಮಗೆ ತಿಳಿದಿದೆಯೇ?**

1 ಗ್ರಾಮ್ ಹತ್ತಿ 23 ಗ್ರಾಂ ನೀರನ್ನು ಹಿಡಿದಿಟ್ಟು ಕೊಳ್ಳ ಬಲ್ಲದು. ಜೇಡಿಮಣ್ಣು ಅತಿಹೆಚ್ಚು ನೀರನ್ನು ಹಿಡಿದಿಟ್ಟುಕೊಳ್ಳುತ್ತದೆ.ಮರಳು ಅತಿ ಕಡಿಮೆ ನೀರನ್ನು ಹಿಡಿದಿಟ್ಟುಕೊಳ್ಳುತ್ತದೆ.

**ಕ್ವಿಜ್:**

ಸಾವಯುವ ವಸ್ತುಗಳಿಂದ ಕೂಡಿದ ಮಣ್ಣು ಹೆಚ್ಚು ನೀರನ್ನು ಹಿಡಿದಿಟ್ಟುಕೊಳ್ಳಬಲ್ಲದು ಎನ್ನುವುದಕ್ಕೆ ಒಂದು ಪ್ರಯೋಗ ಮಾಡಿ ತಿಳಿಸಿ.

1.ಭೂಮಿಯ ಮೇಲಿರುವ ನೀರಿನ ಮೂರು ಸ್ವರೂಪಗಳು ಯಾವುವು?

2.ವಿಶ್ವ ಜಲದಿನವನ್ನು ಎಂದು ಆಚರಿಸುತ್ತೇವೆ?

3.ಯಾವ ಕ್ರಿಯೆಯಿಂದಾಗಿ ಸಸ್ಯಗಳು ನೀರನ್ನು ಕಳೆದುಕೊಳ್ಳುತ್ತವೆ?



4.ಕಡಲ ತೀರದ ಉಪ್ಪುನೀರಿನಲ್ಲಿ ಬೆಳೆಯುವ ಸಸ್ಯಗಳಿಗೆ ಏನೆನ್ನುತ್ತೇವೆ?

**ಮಲೇರಿಯಾ ಖಾಯಿಲೆಯಿಂದಾಗಿ ಪ್ರತಿವರ್ಷ ಲಕ್ಷಗಟ್ಟಲೆ ಜನರು ಸಾಯುತ್ತಿದ್ದಾರೆ. ಉಷ್ಣವಲಯದ ಈ ಭಯಂಕರ ಸಾಂಕ್ರಾಮಿಕ ರೋಗವನ್ನು ನಿರ್ಮೂಲನ ಮಾಡುವುದು ನಮ್ಮೆಲ್ಲರ ಕರ್ತವ್ಯ.**

ಪ್ರತಿವರ್ಷ ಆಗಸ್ಟ್ 20 ರಂದು ಜಾಗತಿಕ ಮಲೇರಿಯಾ ದಿನವನ್ನಾಗಿ ಆಚರಿಸಲಾಗುತ್ತದೆ.ಡಾಕ್ಟರ್ ರೊನಾಲ್ಡ್ ರಾಸ್ ರವರು 1897 ರಲ್ಲಿ ಹೆಣ್ಣು ಅನಾಫಿಲಿಸ್ ಸೊಳ್ಳೆಯಿಂದ ಮಲೇರಿಯಾ ರೋಗ ಹರಡುತ್ತದೆ ಎಂದು ಮತ್ತು ಈ ರೋಗಕ್ಕೆ ಪ್ಲಾಸ್ಮೋಡಿಯಂ ಎಂಬ



ಏಕಕೋಶ ಜೀವಿ ಕಾರಣವೆಂದು ತಮ್ಮ ಸಂಶೋಧನೆಯಿಂದ ದೃಢಪಡಿಸಿದರು. ಇದಕ್ಕಾಗಿ ಅವರಿಗೆ 1902 ರಲ್ಲಿ ನೊಬೆಲ್ ಪಾರಿತೋಷಕ ಲಭಿಸಿತು.

1.ಮನೆಯ ಸುತ್ತ ನೀರು ನಿಲ್ಲದಂತೆ ನೋಡಿಕೊಳ್ಳಿ.

2.ಮಲಗುವಾಗ ಖಡ್ಡಾಯವಾಗಿ ಸೊಳ್ಳೆಪರದೆಯನ್ನು ಬಳಸಿ.




**ಪ್ರಥಮ್ ಚಟುವಟಿಕೆ ಮತ್ತು ಸಂಪನ್ಮೂಲ ಕೇಂದ್ರ**

ಹಿರಿಯ ಪ್ರಾಥಮಿಕ ಮಟ್ಟದಲ್ಲಿ ವಿಜ್ಞಾನ ಕಲಿಯಲು,ಕಲಿಸಲು ನಮ್ಮ ಕೇಂದ್ರವು ಉತ್ತಮ ಕೇಂದ್ರವಾಗಿದೆ.ಸದಸ್ಯತ್ವ ಉಚಿತ.

ಸ್ವಯಂ ಸೇವಕರಾಗಲು ಅವಕಾಶವಿದೆ.

.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ +919110477512**